

ದುಬೈ ಎಂದಾಕ್ಷಣ ಮೈಮನಸುಗಳಲ್ಲಿ ಅಚ್ಚರಿಯ ಸೆಳಕೊಂದು ಹಾದುಹೋಗುತ್ತದೆ. ಕಾರಣ ಇಷ್ಟೆ, ಮಧ್ಯ ಪ್ರಾಚ್ಯದ ಯುಎಇ ದೇಶದ ಏಳು ಎಮಿರೇಟ್‌ಗಳಲ್ಲಿ ಒಂದಾದ 'ದುಬೈ' ಸಾಧಿಸಿರುವ ಅಗಾಧ ಪ್ರಗತಿಗೆ ಯಾರಾದರೂ ಮೆಚ್ಚುಗೆ ಸೂಚಿಸಲೇಬೇಕು; ಮಾಯಾಸದೃಶ ಪ್ರಗತಿಯದು.

ಅತ್ಯಂತ ಜನನಿಬಿಡ ರಾಜ್ಯವಾಗಿರುವ ದುಬೈ ಪರ್ಷಿಯನ್ ಕೊಲ್ಲಿಯ ದಕ್ಷಿಣ ಕರಾವಳಿಯುದ್ದಕ್ಕೂ ಹರಡಿಕೊಂಡಿದೆ. ಯುಎಇ ದೇಶದಲ್ಲಿ ವಿಸ್ತೀರ್ಣದಲ್ಲಿ ಎರಡನೆಯ ಅತಿ ದೊಡ್ಡ ಪ್ರದೇಶವಾಗಿರುವ ಇದು, ರಾಜಧಾನಿ ಅಬುಧಾಬಿಯ ನಂತರದ ಸ್ಥಾನ ಪಡೆದಿದೆ. ಪ್ರವಾಸೋದ್ಯಮ, ತೈಲೋದ್ಯಮ ಮತ್ತು ಸ್ಥಿರಾಸ್ತಿ ಮಾರಾಟ ಉದ್ಯಮ ಮತ್ತು ಹಣಕಾಸು ಸೇವೆಗಳು ಇಲ್ಲಿನ ಪ್ರಮುಖ ಆದಾಯದ ಮೂಲಗಳಾಗಿವೆ.

1960ರ ದಶಕದಲ್ಲಿ ಮತ್ಸ್ಯೋದ್ಯಮವನ್ನು ನೆಚ್ಚಿಕೊಂಡಿದ್ದ ಈ ನಗರ ಈಗ ವಿಶ್ವದ ಜನಪ್ರಿಯ ಪ್ರವಾಸಿ ತಾಣ. ಪ್ರತಿ ವರ್ಷವೂ ಕೌತುಕ ತಾಣವನ್ನು ಸೃಜಿಸುತ್ತಾ ಪ್ರವಾಸಿಗರನ್ನು ಚುಂಬಕದಂತೆ ಸೆಳೆಯುತ್ತಿರುವ ದುಬೈಯನ್ನು ನೋಡಲೇಬೇಕು. ಹಾಂ, ನಾನೀಗ ಹೇಳಹೊರಟಿರುವುದು ಹಳೆ ದುಬೈನ 'ಡೇರಾ' ಜಿಲ್ಲೆಯ ಅಲ್‌ಧಗಯಾನಲ್ಲಿರುವ ಗೋಲ್ಡ್ ಸೋಕ್ (ಚಿನ್ನ ಪೇಟೆ) ಕುರಿತು.

## ಸ್ವಪ್ನಸದೃಶ ಸುವರ್ಣ ಪೇಟೆ

'ಬಂಗಾರದೊಡವೆ ಬೇಕೆ ನೀರೆ ಬಂಗಾರದೊಡವೆ ಬೇಕೆ, ಅಂಗನೆ ನಿನ್ನಂಗ ಸಿಂಗಾರಕೊಪ್ಪುವ ಬಂಗಾರದೊಡವೆ ಬೇಕು' ಎನ್ನುವ ಹಾಡು ಸಿನಿಮಾದ ಆಚೆಗೆ, ನಿಜಜೀವನಕ್ಕೂ ಹೊಂದುವಂತಹದ್ದು. ಚಿನ್ನ ಎಂದೊಡನೆ ಹೆಣ್ಣುಮಕ್ಕಳ ಕಣ್ಣುಗಳು ಅರಳುತ್ತವೆ. ಇಂಥ ಬಂಗಾರಪ್ರಿಯರ ಪಾಲಿಗೆ 'ಗೋಲ್ಡ್ ಸೋಕ್' ಅತ್ಯಾಕರ್ಷಕ ತಾಣ. ಬರೀ ಚಿನ್ನದಂಗಡಿಗಳೇ ತುಂಬಿರುವ, ಇಡೀ ಪರಿಸರದಲ್ಲಿ ಬಂಗಾರದ ಪ್ರಭೆ ಹೊಂದಿರುವ ಈ ಪ್ರದೇಶ, ದುಬೈನ ಡೇರಾ ಭಾಗದಲ್ಲಿದೆ. ಚಿನ್ನ ಕೊಳ್ಳದಿದ್ದರೂ ಚಿಂತೆಯಿಲ್ಲ; ಕುತೂಹಲಕ್ಕಾಗಿಯಾದೂ ಈ ಪೇಟೆ ನೋಡಬೇಕು.

ದುಬೈಗೆ ಬರುವ ಬಹುತೇಕ ಪ್ರವಾಸಿಗರು 'ಗೋಲ್ಡ್ ಸೋಕ್'ಗೆ ಭೇಟಿ ಕೊಡುತ್ತಾರೆ. ಗುಣಮಟ್ಟದ ಚಿನ್ನ ಸಿಗುವ ಕಾರಣಕ್ಕೆ, ದುಬೈ ಭೇಟಿಯ ನೆನಪಿಗೆ ಚಿನ್ನ ಕೊಳ್ಳಲು ಬಯಸುವವರು ಈ ಚಿನ್ನದ ಪೇಟೆ ಹುಡುಕಿಕೊಂಡು ಬರುತ್ತಾರೆ.

## ಸಾಲು ಸಾಲು ಚಿನ್ನದಂಗಡಿ

'ಗೋಲ್ಡ್ ಸೋಕ್‌ನಲ್ಲಿ ಚಿನ್ನ, ಬೆಳ್ಳಿ, ವಜ್ರದ ಆಭರಣಗಳ ವಹಿವಾಟು ನಡೆಸುವ ಸುಮಾರು 380 ಅಂಗಡಿಗಳಿವೆ. ಮಹಾನಗರಗಳಲ್ಲಿ ಸಾಲು ಸಾಲು ಉಡುಪುಗಳ ಮಳಿಗೆಗಳಿರುವಂತೆ ದುಬೈ ಪೇಟೆಯಲ್ಲಿ ಆಭರಣ ಮಳಿಗೆಗಳು! ಅಂದಹಾಗೆ, ಈ ಅಂಗಡಿಗಳಲ್ಲಿ ಖರೀದಿಸುವ ಚಿನ್ನಕ್ಕೆ ಗುಣಮಟ್ಟದ ಖಾತರಿಯಿರುತ್ತದೆ. ಸರ್ಕಾರದ ಕಣ್ಗಾವಲಿನಲ್ಲಿರುವುದರಿಂದ ಇಲ್ಲಿ ಬಂಗಾರ ಖರೀದಿಸಿದರೆ ಮೋಸ ಇಲ್ಲವೆನ್ನುವುದು ಗ್ರಾಹಕರ ನಂಬಿಕೆ.




## ತೂಕದ ಉಂಗುರ!

'ಗೋಲ್ಡ್ ಸೋಕ್'ನ ಆಕರ್ಷಣೆಗಳು ಒಂದೆರಡಲ್ಲ. ಒಂದರ್ಥದಲ್ಲಿ ಇದು ಅಪೂರ್ವ ಹಾಗೂ ಅಮೂಲ್ಯ ವಸ್ತುವಿಶೇಷಗಳ ವಸ್ತುಸಂಗ್ರಹಾಲಯದಂತೆಯೂ ಕಾಣಿಸುತ್ತದೆ. ವಿಶ್ವದಲ್ಲಿಯೇ ಅತೀ ಹೆಚ್ಚು ಭಾರದ ಚಿನ್ನದ ಉಂಗುರ ಸಹ ಇಲ್ಲಿನ ಮಳಿಗೆಯೊಂದರಲ್ಲಿ ನೋಡಲು ಲಭಿಸುತ್ತದೆ.

65 ಕಿಲೋ ತೂಕದ ಈ ಉಂಗುರದಲ್ಲಿ 5.1 ಕಿಲೋ ತೂಕದ ಬೆಲೆಬಾಳುವ ಕಲ್ಲುಗಳನ್ನು ಅಳವಡಿಸಲಾಗಿದೆ. ಈ ಉಂಗುರದ ಹೊರ ಪರಿಧಿ 700 ಮಿ.ಮೀ. ಇದೆ. ಒಳ ವ್ಯಾಸ 490 ಮಿ.ಮೀ.ನಷ್ಟಿದೆ. ಈ ಭಾರೀ ಉಂಗುರ ಗಿನ್ನೆಸ್ ದಾಖಲೆ ಪುಸ್ತಕದಲ್ಲಿ ಸ್ಥಾನ ಪಡೆದುಕೊಂಡಿದೆ. ಬಿಗಿ ಭದ್ರತೆಯಲ್ಲಿರುವ ಈ ಉಂಗುರ ನೋಡುವುದೇ ಒಂದು ಸೊಗಸು. ಕೆಲವರಂತೂ ಮೈಮರೆತವರಂತೆ ಆ ಉಂಗುರ ನೋಡುತ್ತಲೇ ಬಹಳ ಹೊತ್ತು ನಿಲ್ಲುತ್ತಾರೆ. ಅಂದಹಾಗೆ, 55 ಕುಶಲ ಕರ್ಮಿಗಳು, ಪ್ರತಿ ನಿತ್ಯ 10 ತಾಸುಗಳ ದುಡಿಮೆಯಂತೆ 45 ದಿನಗಳ ಕಾಲ ದುಡಿದು ಈ ಉಂಗುರ ನಿರ್ಮಿಸಿದ್ದಾರೆ. ದುಬೈನ ಕಂಪನಿ ತೈಬಾದ ಒಡೆತನದ ಈ ಉಂಗುರದ ಮಾರುಕಟ್ಟೆ ಬೆಲೆ 30 ಲಕ್ಷ ಅಮೆರಿಕನ್ ಡಾಲರ್‌ಗಳು.

ಚಿನ್ನದ ಪೇಟೆಗೆ ಸಮೀಪದಲ್ಲಿಯೇ ಮೀನಿನ ಮಾರುಕಟ್ಟೆಯಿದೆ. ಅಲ್ಲಿನ ಮತ್ಸ್ಯವೈವಿಧ್ಯ ರುಚಿಬಾಕರ ಕುತೂಹಲ ಕೆರಳಿಸುವಂತಹದ್ದು. ತರಕಾರಿ ಹಾಗೂ ಸಾಂಬಾರ ಪದಾರ್ಥಗಳ ಅಂಗಡಿಗಳನ್ನು ಹೊಂದಿರುವ ಪೇಟೆಯೂ ಅಲ್ಲಿದೆ. 'ದುಬೈ ಕ್ರಿಕ್'ನಿಂದ ಸಾಮಾನು ಸರಂಜಾಮುಗಳನ್ನು ಚಿಕ್ಕ ಚಿಕ್ಕ ಹಡಗುಗಳಿಗೆ ತುಂಬಿಸಿ ಸಾಗಿಸುವ ದೃಶ್ಯ ಗಮನಸೆಳೆಯುತ್ತದೆ. ಅಲ್ಲಿಂದ 3 ಕಿ.ಮೀ. ದೂರದಲ್ಲಿರುವ ಆ ಬದಿಯ 'ಬರ್–ದುಬೈ'ಗೆ ಸಮುದ್ರ ಯಾನದ ಮೂಲಕ ಫೆರ್ರಿಯಲ್ಲಿ ತಲುಪಬಹುದು.

## ಐಷಾರಾಮಿ ದುಬೈ

ದುಬೈ ಎಂದರೆ ಪ್ರವಾಸಿಗರ ಸ್ವರ್ಗ ಇದ್ದಂತೆ. ಗಗನಚುಂಬಿ ಕಟ್ಟಡಗಳು, ಐಷಾರಾಮಿ ಮಹಲುಗಳು, ವಿಶ್ವದ ಸರಕು ಸರಂಜಾಮನ್ನೆಲ್ಲ ತುಂಬಿಕೊಂಡಿರುವ ಮಾಯಾಬಜಾರ್‌ನಂಥ ಮಾಲ್‌ಗಳು, ವಿಲಾಸ–ವಿನೋದವನ್ನು ಒದಗಿಸುವ ಸಂಕೀರ್ಣಗಳು – ಹೀಗೆ ದುಬೈನ ಆಕರ್ಷಣೆಗಳು ಒಂದೆರಡಲ್ಲ. ಈ ಮನುಷ್ಯ ನಿರ್ಮಿತ ಅಚ್ಚರಿಗಳ ಸಾಲಿಗೆ ನೂರಾರು ಚಿನ್ನದ ಅಂಗಡಿಗಳೂ ಸೇರುತ್ತವೆ.

ದುಬೈನ ಆಕರ್ಷಣೆಗಳೆಲ್ಲವೂ ಮನುಷ್ಯನಿರ್ಮಿತ ಅಚ್ಚರಿಗಳೇ ಹೊರತು ಪ್ರಕೃತಿಸಹಜವಾದ ಸೌಂದರ್ಯವಲ್ಲ ಎನ್ನುವುದು ಮುಖ್ಯ. ಅಗಾಧ ಕಡಲು ಮತ್ತು ಮರಳು ಹಾಗೂ ಖರ್ಜೂರದ ಮರಗಳಷ್ಟೇ ಇಲ್ಲಿನ ಪ್ರಕೃತಿಯ ಬಿಂಬಗಳು.